

ಇತ್ತೀಚೆಗೆ ನಡೆದ ಕೊಡಗು ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಜನಪದ ನೃತ್ಯ ಹಾಗೂ ಕೋಲಾಟ ವಿಭಾಗದಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆಯಾದ ಸರಕಾರಿ ಸಂಯುಕ್ತ ಪ್ರೌಢಶಾಲೆ ಕಿರಗಂದೂರು ಇಲ್ಲಿನ ವಿದ್ಯಾರ್ಥಿ ತಂಡ



**ತುರ್ತು ಕರೆ:** ಪೊಲೀಸ್ : 100 ಅಗ್ನಿಶಾಮಕ ದಳ : 101 ಆ್ಯಂಬುಲೆನ್ಸ್: 108 ಜಿಲ್ಲಾಧಿಕಾರಿ : 225500 ಪೊಲೀಸ್ ಅಧೀಕ್ಷಕರು : 229000 ಮೆಸ್ಕಾಂ : 228454 ಕಾಫಿ ಮಂಡಳಿ : 225518 ಅರಣ್ಯ ಸಂರಕ್ಷಣಾಧಿಕಾರಿ : 225708 ಅಬಕಾರಿ : 225697 ಲೋಕೋಪಯೋಗಿ : 225645

## ವೈದ್ಯರ ಬಂಧನ ಕ್ರಮಕ್ಕೆ ಖಂಡನೆ

**ಸುಂಟಿಕೊಪ್ಪ :** ಇತ್ತೀಚೆಗೆ ಮಡಿಕೇರಿಯಲ್ಲಿ ಜಿಲ್ಲಾ ಸರಕಾರಿ ಆಸ್ಪತ್ರೆಯ ವೈದ್ಯರು ನಡೆಸಿದ ಶಸ್ತ್ರ ಚಿಕಿತ್ಸೆ ವಿಫಲಗೊಂಡು ಬಾಲಕನೊಬ್ಬ ಮೃತಪಟ್ಟ ಹಿನ್ನಲೆಯಲ್ಲಿ ಜಯ ಕರ್ನಾಟಕ ಸಂಘದ ಪದಾಧಿಕಾರಿಗಳು ವೈದ್ಯರನ್ನು ಬಂಧನಕ್ಕೊಳಪಡಿಸಿದ ಕ್ರಮವನ್ನು ಕೊಡಗು ಜಿಲ್ಲಾ ವಾಹನ ಚಾಲಕರ ಮತ್ತು ಮಾಲೀಕರ ಸಂಘದ ಅಧ್ಯಕ್ಷರಾದ ಎಂ.ಎ.ಉಸ್ಮಾನ್‌ರು ಖಂಡಿಸಿದ್ದಾರೆ.

## ಇಂದು ರಾಷ್ಟ್ರೀಯ ಸಂಕಲ್ಪ ದಿನ

**ಮಡಿಕೇರಿ:** ಜಿಲ್ಲಾಡಳಿತ ವತಿಯಿಂದ ಅಕ್ಟೋಬರ್ 31 ರಂದು ಪೂರ್ವಾಹ್ನ 11.00 ಗಂಟೆಗೆ ಕೋಟೆ ಹಳೇ ವಿಧಾನ ಸಭಾಂಗಣದಲ್ಲಿ ನಡೆಯಲಿರುವ ರಾಷ್ಟ್ರೀಯ ಸಂಕಲ್ಪ ದಿನ ಆಚರಣೆಗೆ ಎಲ್ಲಾ ಕಚೇರಿ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಹಾಗೂ ಶಾಲಾ ಮುಖ್ಯೋಪಾಧ್ಯಾಯರು ಮತ್ತು ಶಾಲಾ ಮಕ್ಕಳು ಕಡ್ಡಾಯವಾಗಿ ಹಾಜರಾಗಲು ಜಿಲ್ಲಾಧಿಕಾರಿಯವರು ಈ ಮೂಲಕ ಸೂಚಿಸಿದ್ದಾರೆ.

## ಸಮಾಜ ಕಲ್ಯಾಣ ಇಲಾಖೆ ಸಚಿವರ ಪ್ರವಾಸ

**ಮಡಿಕೇರಿ :** ರಾಜ್ಯ ಸಮಾಜ ಕಲ್ಯಾಣ ಇಲಾಖೆ ಸಚಿವರಾದ ಡಿ.ಸುಧಾಕರ್ ಇಂದು ಅ. 31 ರ ಬೆಳಿಗ್ಗೆ 10.30 ಕ್ಕೆ ಕುಶಾಲನಗರದ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯದ ಹೊಸ ಕಟ್ಟಡದ ಉದ್ಘಾಟನೆ ನಂತರ ಮಧ್ಯಾಹ್ನ 12.30 ಕ್ಕೆ ಬಸವನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಭೇಟಿ ಹಾಗೂ ಬಯೋಮೆಟ್ರಿಕ್ ಹಾಜರಾತಿ ಉದ್ಘಾಟನೆ ಹಾಗೂ ವಿದ್ಯಾರ್ಥಿಗಳೊಂದಿಗೆ ಸಮಾಲೋಚನೆ ನಡೆಸಲಿದ್ದಾರೆ. ಮಧ್ಯಾಹ್ನ 1 ಗಂಟೆಗೆ ಬಸವನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಪತ್ರಿಕಾಗೋಷ್ಠಿ ನಡೆಸುವರು. ಅಪರಾಹ್ನ 2 ಗಂಟೆಗೆ ಸೋಮವಾರಪೇಟೆ ತಾಲೂಕಿನ ಗಿರಿಜನ ಹಾಡಿಗಳಿಗೆ
ಭೇಟಿ ಹಾಗೂ ಸುವರ್ಣ ಸಂಕಲ್ಪ ಯೋಜನೆಯ ಅನುಷ್ಠಾನದ ಪರಿಶೀಲನೆ ನಡೆಸಿ ಸಂಜೆ 6 ಗಂಟೆಗೆ ಕುಶಾಲನಗರದಿಂದ ಬೆಂಗಳೂರಿಗೆ ವಾಪಸ್ಸಾಗಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದೌರ್ಜನ್ಯ ಮುಂದುವರಿದರೆ ಹೋರಾಟ ಅನಿವಾರ್ಯ

**ಸೋಮವಾರಪೇಟೆ:** ದಲಿತರ ಮೇಲೆ ದೌರ್ಜನ್ಯಗಳು ಹೀಗೆಯೇ ನಡೆಯುತ್ತಿದ್ದರೆ ಮುಂದೆ ನಿರಂತರ ಹೋರಾಟ ನಡೆಸಬೇಕಾಗುತ್ತದೆ ಎಂದು ದಲಿತ ಹಿತರಕ್ಷಣಾ ಒಕ್ಕೂಟದ ಪದಾಧಿಕಾರಿಗಳು ಎಚ್ಚರಿಸಿದ್ದಾರೆ.

ಗುರುವಾರ ಸಂಜೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಭಾನುವಾರ ರಾತ್ರಿ ಶನಿವಾರಸಂತೆಯಲ್ಲಿ ಸಿಪಿಐ ಎಂ ಎಲ್ ಪಕ್ಷದ ಕಾರ್ಯಕರ್ತರ ಮೇಲೆ ಸ್ಥಳೀಯರು ಮಾರಣಾಂತಿಕ ಹಲ್ಲೆ ನಡೆಸಿರುವುದನ್ನು ಖಂಡಿಸಿದರು. ಹಲ್ಲೆ ನಡೆಸಿದವರನ್ನು 15 ದಿನದೊಳಗೆ ಬಂಧಿಸಬೇಕು ಹಾಗೂ ಹಲ್ಲೆಗೆ ಒಳಗಾದವರ ಮೇಲೆ ಹೂಡಿರುವ ಮೊಕದ್ದಮೆ ವಾಪಸ್ ಪಡೆಯಬೇಕೆಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ದಲಿತ ಹಿತರಕ್ಷಣಾ ವೇದಿಕೆಯ ಪದಾಧಿಕಾರಿಗಳಾದ ಜಯಪ್ಪ ಹಾನಗಲ್, ಡಿ.ಎಸ್. ನಿರ್ವಾಣಪ್ಪ, ಹೆಚ್.ಎ.ನಾಗರಾಜ್, ಜಯೇಂದ್ರ ಹಾಗೂ ರಾಜಪ್ಪ ಉಪಸ್ಥಿತರಿದದರು.

## ನ.2: ಸ್ತ್ರೀಶಕ್ತಿ ಭವನ ಉದ್ಘಾಟನೆ

**ಮಡಿಕೇರಿ:** ಜಿಲ್ಲಾ ಮಟ್ಟದ ಸ್ತ್ರೀಶಕ್ತಿ ಭವನ ಹಾಗೂ ಮಾರುಕಟ್ಟೆ ಸಂಕೀರ್ಣದ ಉದ್ಘಾಟನಾ ಸಮಾರಂಭ ನ.2 ರಂದು ಪೊನ್ನಂಪೇಟೆ ಗ್ರಾ.ಪಂ. ಕಚೇರಿ ಬಳಿಯಲ್ಲಿ ನಡೆಯಲಿದೆ.

ಪೂರ್ವಾಹ್ನ 11 ಗಂಟೆಗೆ ವಿಧಾನ ಸಭಾ ಉಪಸಭಾಧ್ಯಕ್ಷ ಕೆ.ಜಿ.ಬೋಪಯ್ಯ ಅವರು ಸ್ತ್ರೀಶಕ್ತಿ ಭವನ ಹಾಗೂ ಮಾರುಕಟ್ಟೆ ಸಂಕಿರಣ ಉದ್ಘಾಟಿಸಲಿದ್ದು, ಜಿ.ಪಂ. ಅಧ್ಯಕ್ಷ ವಿ.ಎಂ.ವಿಜಯ ಆಧ್ಯಕ್ಷತೆ ವಹಿಸಲಿದ್ದಾರೆ. ಶಾಸಕರುಗಳಾದ ಎಂ.ಪಿ.ಅಪ್ಪಚ್ಚುರಂಜನ್, ಎಂ.ಸಿ.ನಾಣಯ್ಯ, ಎಸ್. ಜಿ.ಮೇದಪ್ಪ, ಸಂಸದ ಹೆಚ್.ವಿಶ್ವನಾಥ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

## ಪಡಿತರ ಚೀಟಿ ವಿತರಣೆ

**ಮಡಿಕೇರಿ :** ಸೋಮವಾರಪೇಟೆ ತಾಲೂಕಿನಲ್ಲಿ ಭಾವಚಿತ್ರ ಹೊಂದಿರುವ ಖಾಯಂ ಪಡಿತರ ಚೀಟಿಗಳನ್ನು ವಿತರಿಸುವ ಕಾರ್ಯಕ್ರಮವು ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ನವೆಂಬರ್ 19 ರವರೆಗೆ ನಡೆಯಲಿದೆ.

ಅ.31 ರಿಂದ ನ. 03 ರವರೆಗೆ ಬೆಳಿಗ್ಗೆ 9.00 ರಿಂದ ಸಂಜೆ 5.00 ಗಂಟೆಯವರೆಗೆ ಚೆಟ್ಟಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಚೆಟ್ಟಳ್ಳಿ, ಪೊನ್ನತ್‌ಮೊಟ್ಟೆ, ಕೆ.ಚೆಟ್ಟಳ್ಳಿ, ಕಂಡಕೆರೆ, ಚೇರಳಶ್ರೀಮಂಗಲ, ಈರಳೆವಳಮುಡಿ, ನ. 02 ರಿಂದ 03 ರವರೆಗೆ ನಾಕೂರು ಶಿರಂಗಾಲ ಗ್ರಾಮ ಪಂಚಾಯತ್ ವ್ಯಾಪ್ತಿಯ ಕಾನ್‌ಬೈಲು, ನ. 02 ರಿಂದ 03 ರವರೆಗೆ ಗರ್ವಾಲೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಗರ್ವಾಲೆ, ಶಿರಂಗಳ್ಳಿ, ಕಿರುದಲೆ, ಸೂರ್ಲಬಿ, ಕಿಕ್ಕರಲ್ಲಿ, ಕುಂಬಾರ ಗಾಡಿಗೆ, ಮಂಕ್ಯ ಹಾಗೂ ನ.02 ರಿಂದ 04 ರವರೆಗೆ ಇಗ್ಗೋಡ್ಲು, ಮೂವತ್ತೊಕ್ಲು, ಜೆಂಬೂರು, ಕುಂಬೂರು, ಕಾಂಡನಕೊಲ್ಲಿ, ಜೆಂಬೂರು ಲೈನ್ ಕುಂಬೂರು, ಹಾಡಗೇರಿ ಗ್ರಾಮಗಳಲ್ಲಿ ಖಾಯಂ ಪಡಿತರ ಚೀಟಿ ವಿತರಣೆ ನಡೆಯಲಿದೆ.

## ನ.1-9 : ಡಿವೈಎಫ್‌ಐ ಜಾಥಾ

**ಮಡಿಕೇರಿ:** ಕನ್ನಡ ರಾಜ್ಯೋತ್ಸವದ ಅಂಗವಾಗಿ ಉದ್ಯೋಗಾಧಾರಿತ ಕರ್ನಾಟಕ್ಕಾಗಿ ಆಗ್ರಹಿಸಿ ಡಿವೈ ಎಫ್‌ಐ ಸಂಘಟನೆ ವತಿಯಿಂದ ನ.1 ರಿಂದ 9ರವರೆಗೆ ವಾಹನ ಜಾಥಾ ನಡೆಸಲಾಗುವುದು ಎಂದು ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಆರ್.ಭರತ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ನ.1 ರಂದು ಪೂರ್ವಾಹ್ನ ಸಿದಾಪುರ ಬಸ್ ನಿಲ್ದಾಣದಲ್ಲಿ ವಾಹನ ಜಾಥಾದ ಉದ್ಘಾಟನೆ ನಡೆಯಲಿದ್ದು, ಸಂಘಟನೆಯ ರಾಜ್ಯಾಧ್ಯಕ್ಷ ಎಂ.ಎಲ್.ಭರತ್‌ರಾಜ್ ನೆರವೇರಿಸಲಿದ್ದಾರೆ ಎಂದು ಅವರು ಅವರು ಹೇಳಿದರು.

# ಹಾಕಿ ಪಂದ್ಯಾಟ: ಜಿಲ್ಲಾ ತಂಡ ಸೆಮಿಫೈನಲ್‌ಗೆ

**ಗೋಣಿಕೊಪ್ಪ ಲು:** ಜಿಲ್ಲಾ ಪದವಿ ಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆ ಹಾಗೂ ಗೋಣಿಕೊಪ್ಪ ಕಾವೇರಿ ಕಾಲೇಜು ಇವರುಗಳ ಸಂಯುಕ್ತಾಶ್ರಯದಲ್ಲಿ ಇಲ್ಲಿನ ಕಾವೇರಿ ಕಾಲೇಜು ಮೈದಾನ ಹಾಗೂ ಪೊನ್ನಂಪೇಟೆಯ ಸರಕಾರಿ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ನಡೆಯುತ್ತಿರುವ ರಾಜ್ಯ ಮಟ್ಟದ ಬಾಲಕ ಹಾಗೂ ಬಾಲಕಿಯರ ಹಾಕಿ ಪಂದ್ಯಾವಳಿಯ ಬಾಲಕಿಯರ ವಿಭಾಗದಲ್ಲಿ ಕೊಡಗು ತಂಡ ಬೆಂಗಳೂರು ದಕ್ಷಿಣ ತಂಡದ ವಿರುದ್ದ 4-0 ಗೋಲು ಗಳಿಸಿ ಸೆಮಿ ಫೈನಲ್ ಪ್ರವೇಶಿಸಿದರೆ, ಮೈಸೂರು ತಂಡ ಬೆಂಗಳೂರು ಉತ್ತರ ತಂಡವನ್ನು 2-0 ಗೋಲುಗಳಿಂದ ಮಣಿಸಿ ಸೆಮಿಫೈನಲ್‌ಗೆ ಅರ್ಹತೆ ಪಡೆದಿದೆ.

ಬಾಗಲಕೋಟೆ ತಂಡ ಕೋಲಾರ ತಂಡವನ್ನು 3-0 ಗೋಲಿನಿಂದ ,ದಾವಣಗೆರೆ ತಂಡ ಹಾಸನ ತಂಡವನ್ನು 4-3 ಗೋಲುಗಳಿಂದ ಮಣಿಸಿ ಸೆಮಿ ಫೈನಲ್ ಪ್ರವೇಶಿಸಿದರೆ ಬಾಲಕರ ವಿಭಾಗದಲ್ಲಿ ಬೆಂಗಳೂರು ದಕ್ಷಿಣ ತಂಡ ದಾರವಾಡ ತಂಡವನ್ನು 4-0 ಗೋಲಿನಿಂದ, ಬೆಂಗಳೂರು ಉತ್ತರ ಶಿವಮೊಗ್ಗ ತಂಡವನ್ನು 5-0,ಕೊಡಗು ತಂಡ ಹಾಸನ ತಂಡವನ್ನು 1-0 ಗೋಲುಗಳಿಂದ ಜಯಗಳಿಸಿ ಸೆಮಿ ಫೈನಲ್ ಪ್ರವೇಶಿಸಿದರೆ ಸಮಯದ ಅಭಾವದಿಂದ ಮಂಗಳೂರು ಹಾಗೂ ತುಮಕೂರು ನಡುವಿನ ಪಂದ್ಯ ತಾ.31 ರಂದು ನಡೆಯಲಿದ್ದು,ಇದರಲ್ಲಿ ಜಯಗಳಿಸಿದ ತಂಡ ಸೆಮಿ ಫೈನಲ್ ಪ್ರವೇಶಿಸಲಿದೆ.

ರಾಜ್ಯದ ವಿವಿಧೆಡೆ ಗಳಿಂದ ಬಾಲಕಿಯರ ವಿಭಾಗದಲ್ಲಿ 19 ತಂಡ



ಗೋಲು ಪಡೆಯಲು ಹಣಾಹಣಿ ನಡೆಸುತ್ತಿರುವ ಸ್ಪರ್ಧಾಳುಗಳು



ಉದ್ಘಾಟನೆಗೆ ಮುನ್ನ ಕೊಡವ ಮಹಿಳೆಯರಿಂದ ಸಾಂಪ್ರದಾಯಿಕ ಉಮ್ಮತ್ತಾಟ್ ಪ್ರದರ್ಶನಗೊಂಡಿತು.

ಭಾಗವಹಿಸಿ ಬೆಂಗಳೂರು ಉತ್ತರ ತಂಡ ಹಾವೇರಿ ತಂಡವನ್ನು 4-0,ಕೊಡಗು ತಂಡ ಮಂಗಳೂರು ತಂಡವನ್ನು 7-0,ಬೆಂಗಳೂರು ದಕ್ಷಿಣ ತಂಡ ಮಂಡ್ಯ ತಂಡವನ್ನು 2-0,ಹಾಸನ ತಂಡ ಬೀದರ್ ತಂಡವನ್ನು 4-0, ಬಾಗಲಕೋಟೆ ತುಮಕೂರು ತಂಡವನ್ನು 4-0,ಕೋಲಾರ ತಂಡ ಚಿತ್ರದುರ್ಗ ತಂಡವನ್ನು 2-0,ದಾವಣಗೆರೆ ತಂಡ ಗದಗ ತಂಡವನ್ನು 1-0,ಬಾಗಲಕೋಟೆ ತಂಡ ಬಳ್ಳಾರಿ ತಂಡವನ್ನು 4-0, ಉಡುಪಿ ತಂಡ ಗುಲ್ಬರ್ಗಾ ತಂಡವನ್ನು 2-0, ಗೋಲು ಗಳಿಂದ ಮಣಿಸಿ 2ನೇ ಸುತ್ತಿಗೆ ಅರ್ಹತೆ ಪಡೆದಿತ್ತು. ಬಾಲಕರ ವಿಭಾಗದಲ್ಲಿ ಶಿವಮೊಗ್ಗ ತಂಡ ಹಾವೇರಿ ತಂಡವನ್ನು 3-0,ದಾರವಾಡ ತಂಡ ಬೆಂಗಳೂರು ಗ್ರಾಮಾಂತರ ತಂಡವನ್ನು 2-0,ಮಂಡ್ಯ ತಂಡ ಕೋಲಾರ ತಂಡವನ್ನು 2-0, ತುಮಕೂರು ತಂಡ ಮೈಸೂರು ತಂಡವನ್ನು 1-0,ಬೆಳಗಾವಿ ತಂಡ ಚಿತ್ರದುರ್ಗ ತಂಡವನ್ನು 3-2, ಬಾಗಲಕೋಟೆ ತಂಡ ಚಿಕ್ಕ ಬಳ್ಳಾಪುರ ತಂಡವನ್ನು 4-0,ಬಳ್ಳಾರಿ ತಂಡ ದಾವಣಗೆರೆ ತಂಡವನ್ನು 2-0,ಮಂಗಳೂರು ತಂಡ ಚಿಕ್ಕಮಗಳೂರು ತಂಡವನ್ನು 5-0,ಹಾಸನ ತಂಡ ಗುಲ್ಬರ್ಗಾ ತಂಡವನ್ನು 3-0,ಮಂಗಳೂರು ಬೆಳಗಾವಿ ತಂಡವನ್ನು 4-0 ಗೋಲುಗಳಿಂದ, ದಾರವಾಡ ಉಡುಪಿತಂಡವನ್ನು 1-0 ಗೋಲುಗಳಿಂದ ಮಣಿಸಿ 2ನೇ ಸುತ್ತಿಗೆ ಅರ್ಹತೆ ಪಡೆದಿತ್ತು.

ಇದಕ್ಕೂ ಮುನ್ನ ನಡೆದ ಪಂದ್ಯಾವಳಿಯ ಉದ್ಘಾಟನೆಯನ್ನು ಕಾವೇರಿ ವಿದ್ಯಾ ಸಂಸ್ಥೆಯ ನಿರ್ದೇಶಕ ಹಾಗೂ ವಕೀಲ ಎ.ಟಿ.ಭೀಮಯ್ಯ ಧ್ವಜಾರೋಹಣ ಮಾಡುವ ಮೂಲಕ ಚಾಲನೆ ನೀಡಿ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿ ಗಳಾಗಿ ಕಾವೇರಿ ವಿದ್ಯಾ ಸಂಸ್ಥೆಯ ಅಧ್ಯಕ್ಷ ಕೆ.ಎ.ಚಿಣ್ಣಪ್ಪ ,ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಎಂ.ಎಸ್. ವೆಂಕಟೇಶ್,ಜಿಲ್ಲಾ ಪದವಿ ಪೂರ್ವ ಕಾಲೇಜು ಪ್ರಾಚಾರ್ಯರ ಸಂಘದ ಅಧ್ಯಕ್ಷ ಟಿ.ಎಸ್. ಗೋಪಾಲ್,ಕಾವೇರಿ ಪದವಿ ಕಲೇಜು ಪ್ರಾಂಶುಪಾಲ ಎಂ.ಕೆ.ಮೊಣ್ಣಪ್ಪ ,ಕೂರ್ಗ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲ ಪ್ರೋ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ಕೆ.ಬಿ.ಇಂದ್ರಬಾಲ,ಕ್ಷೇತ್ರ ಶಿಕ್ಷಣಾಧಿಕಾರಿ ಭಾಗ್ಯಲಕ್ಷೀ, ಮಹಿಳಾ ಹಾಕಿ ಅಸೋಸಿಯೇಶನ್ ಅಧ್ಯಕ್ಷೆ ಸ್ವಾತಿ ಬೋಪಣ್ಣ ಉಪಸ್ಥಿತರಿದ್ದರು.

ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ್ದ ಕ್ರೀಡಾಳುಗಳು ಮೈದಾನದಲ್ಲಿ ಆಕರ್ಷಕ ಪಥಸಂಚಲನ ನಡೆಸಿದರು. ಸಹನಾ ಮತ್ತು ತಂಡ ಪ್ರಾರ್ಥಿಸಿ,ಪ್ರೋ ಸ್ವಾಗತಿಸಿ,ವಂದಿಸಿದರು.

# ಸರಿತಾ ಪೂಣಚ್ಚ ಗ್ರಾಮವಾಸ್ತವ್ಯ

**ಗೋಣಿಕೊಪ್ಪಲು:** ವೀರಾಜಪೇಟೆ ತಾ.ಪಂ. ಅಧ್ಯಕ್ಷೆ ಸರಿತಾ ಪೂಣಚ್ಚ ಅವರು ಅ.27 ರಂದು ರಾತ್ರಿ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಕೊಲ್ಲಿ ಹಾಡಿಯಲ್ಲಿ ತಾ.ಪಂ. ಸದಸ್ಯೆ ಜೆ.ಕೆ.ಮುತ್ತಮ್ಮ ಅವರೊಂದಿಗೆ ಗ್ರಾಮ ವಾಸ್ತವ್ಯ ಹೂಡಿ ಗಿರಿಜನರ ಸಮಸ್ಯೆ ಆಲಿಸಿದರು.

ಕೊಲ್ಲಿ ಹಾಡಿಯಲ್ಲಿ ಸುಮಾರು 58 ಗಿರಿಜನ ಕುಟುಂಬಗಳು ವಾಸವಿದ್ದು, ಜಿ.ಪಂ. ಮುಖ್ಯಕಾರ್ಯನಿರ್ವಹಣಾಧಿಕಾರಿ ವಿರ್ಜಾ ಅಕ್ಬರುಲ್ಲಾ, ಜಿ.ಪಂ. ಮುಖ್ಯ ಯೋಜನಾಧಿಕಾರಿ ಸಿದಯ್ಯ, ಉಪಕಾರ್ಯದರ್ಶಿ ಬಸವರಾಜು, ಮುಖ್ಯ ಯೋಜನಾ ನಿರ್ದೇಶಕ ಮೋಟಪ್ಪ, ವೀರಾಜಪೇಟೆ ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಡಾ। ನಾಗರಾಜ್, ಸಿಡಿಪಿಓ ಸದಾಶಿವ ಮುಂತಾದವರು ಗಿರಿಜನರ ಮೂಲಭೂತ ಸಮಸ್ಯೆ ಆಲಿಸಿದರು.

ಈ ಸಂದರ್ಭ ಕನ್ನಡ ಸಂಸ್ಕೃತಿ ಇಲಾಖೆ ಉಪನಿರ್ದೇಶಕ ದಾಮೋದರ್ ಸಮ್ಮುಖದಲ್ಲಿ ಗಿರಿಜನ ಸ್ತ್ರೀ- ಪುರುಷರು ಕೋಲಾಟ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

ಜೆ.ಕೆ.ತಿಮ್ಮ ಅವರ ಗುಡಿಸಲಿನಲ್ಲಿ ತಾ.ಪಂ. ಅಧ್ಯಕ್ಷೆ ಸರಿತಾ ಪೂಣಚ್ಚ ಅವರು ಕಾಡು ಗೆಣಸು ಹಾಗೂ ಜೇನನ್ನು ತಿಂದು ಗ್ರಾಮ ವಾಸ್ತವ್ಯ ಹೂಡಿದರು.



ಹಾಡಿಯಲ್ಲಿ ಸರಿತಾ ಪೂಣಚ್ಚ ಉಪಹಾರ ಸೇವಿಸುತ್ತಿರುವುದು.

### ಅಸ್ವಸ್ಥ ವಿದ್ಯಾರ್ಥಿಗಳ ಬಳಿ 'ಮತಾಂತರ' ರೋಗ

# ತೀರ್ಥ ಪ್ರೋಕ್ಷಣೆ ಮಾಡಿದ ವ್ಯಕ್ತಿಯ ಬಂಧನ

**ವೀರಾಜಪೇಟೆ:** ವೀರಾಜಪೇಟೆಯ ಮಾದರಿ ಪ್ರಾಥಮಿಕ 6 ಮಂದಿ ವಿದ್ಯಾರ್ಥಿನಿಯರು ದಿಡೀರ್ ಅಸ್ವಸ್ಥಗೊಂಡಿರುವುದಕ್ಕೆ ಮಾನಸಿಕ ರೋಗ ತುಮುಲ ಕಾರಣ ಎಂದು ವೈದ್ಯರು ಅಭಿಪ್ರಾಯಪಟ್ಟಿದ್ದರೂ, ಈ ಘಟನೆಯನ್ನು ವ್ಯಕ್ತಿಯೊಬ್ಬ ತನ್ನ ಮತಾಂತರದ ಕೃತ್ಯ ಬಳಸಲು ಯತ್ನಿಸಿರುವ ಘಟನೆ ನಡೆದಿದೆ.

ಗುರುವಾರ ಸಂಜೆ ಸುಮಾರು 7.30ರ ಸುಮಾರಿಗೆ ಆಸ್ಪತ್ರೆಗೆ ಭೇಟಿ ನೀಡಿದ ಆರ್ಜಿ-ಕಲ್ಲುಬಾಣೆ ನಿವಾಸಿ ಅಂತೋಣಿ ಎಂಬಾತ ಇದಕ್ಕೆಲ್ಲ ತನ್ನ ಬಳಿ ಔಷಧಿಯಿದೆ ಎಂದು ಹೇಳಿ ಬೈಬಲ್‌ನಿಂದ ಅಸ್ವಸ್ಥರ ತಲೆಗೆಕುಟ್ಟಿ ತಾನು ಹೇಳಿದಂತೆ ಕೇಳುವಂತೆ ವಿದ್ಯಾರ್ಥಿನಿಯರಿಗೆ ತಿಳಿಸಿದ್ದಲ್ಲದೆ, ಅವರನ್ನು ನೆಲದಲ್ಲಿ ಮಲಗಿಸಿ ತನ್ನ ಬಾಟಲಿಯಲ್ಲಿದ್ದ ಪರಮಪವಿತ್ರ ತೀರ್ಥವೆಂದು ಅವರ ಮೇಲೆ ಪ್ರೋಕ್ಷಣೆ ಮಾಡಿ, ಈ ಸಮಸ್ಯೆ ಪರಿಹಾರಕ್ಕೆ ಏಸುವನ್ನು ಪ್ರಾರ್ಥಿಸುವಂತೆ ಒತ್ತಾಯಿಸಿದ್ದಾನೆ.

ವಿದ್ಯಾರ್ಥಿನಿಯರು ಚಿಕಿತ್ಸೆ ಪಡೆಯುತ್ತಿದ್ದ ಸ್ಥಳದಲ್ಲಿದ್ದ ಪೋಷಕರು, ವಿದ್ಯಾರ್ಥಿನಿಯರ ಕಾವಲಿಗಿದ್ದ ಶಾಲಾ ಮುಖ್ಯೋಪಾಧ್ಯಾಯಿನಿ ಪಾರ್ವತಿ ಹಾಗೂ 4 ಜನ ಶಿಕ್ಷಕಿಯರಲ್ಲಿ ಘಟನೆ ಬಗ್ಗೆ ವಿಚಾರಿಸಿದ ಅಂತೋಣಿ ಬಳಿಕ ಈ ಘನ ಕಾರ್ಯ ನೆರವೇರಿಸಿದ್ದಾನೆ.

ಅಷ್ಟರಲ್ಲಿ ಈ ಬಗ್ಗೆ ಮಾಹಿತಿ ಪಡೆದ ಬಿಜೆಪಿ ಮುಖಂಡರಾದ ಸುಜಾ ಕುಶಾಲಪ್ಪ, ಎ.ಬಿ.ಮೋಹನ್, ಅಚ್ಚಪಂಡ ಮಹೇಶ್, ಐನಂಡ ಜಪ್ಪು ಅಚ್ಚಪ್ಪ, ಮಧು, ಕೊಡಗು ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಮಾಜಿ ಅಧ್ಯಕ್ಷ ಪಳನಿಪ್ರಕಾಶ್, ನಗರಾಧ್ಯಕ್ಷ ಮಹದೇವ ಅವರುಗಳು ಸ್ಥಳಕ್ಕೆ ಧಾವಿಸಿ ಅಂತೋಣಿಯ ವರ್ತನೆ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಲ್ಲದೆ ಈ ಘಟನೆ ಬಗ್ಗೆ ನಗರ ಪೊಲೀಸರಿಗೆ ಮಾಹಿತಿ ನೀಡಿದರು.

ಕೂಡಲೆ ಧಾವಿಸಿದ ಪೊಲೀಸರು ಅಂತೋಣಿಯನ್ನು ವಿಚಾರಣೆಗಾಗಿ ತಮ್ಮ ವಶಕ್ಕೆ ತೆಗೆದುಕೊಂಡರು.

ಸಾರ್ವಜನಿಕರಿಂದ ದೊರೆತ ಮಾಹಿತಿ ಪ್ರಕಾರ ಅಂತೋಣಿ ಪೆಂಟಕೋಸ್ ಎಂಬ ಮತಾಂತರ ಜಾಲದ ಸಂಸ್ಥೆಯ ಸದಸ್ಯನಾಗಿದ್ದು, ಕಳೆದ ಹಲವಾರು ವರ್ಷಗಳಿಂದ ಬಡ ಮುಗ್ದ ವರ್ಗದ ಜನರು ಈ ರೀತಿಯ ತೊಂದರೆಗೆ ಒಳಗಾದಾಗ ಅವರ ಬಳಿ ತೆರಳಿ ಅವರ ಮನ ಪರಿವರ್ತಿಸಿ ಮತಾಂತರ ನಡೆಸುವ ಪ್ರಯತ್ನ ಮಾಡುತ್ತಿದ್ದಾನೆಂದು ಹೇಳಲಾಗಿದೆ.

ಆಂತೋಣಿಯನ್ನು ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡ ಸುದ್ದಿ ತಿಳಿದ ಕೊಡಗು ಜಿಲ್ಲಾ ಬಿಲ್ಡಿಂಗ್ ವರ್ಕರ್ಸ್ ಯೂನಿಯನ್ ಅಧ್ಯಕ್ಷನೆಂದು ಹೇಳಿಕೊಳ್ಳುವ ಸುಂಕದ ಕಟ್ಟೆ ನಿವಾಸಿ ವರ್ಗೀಸ್ ಎಂಬಾತ ಆರೋಪಿಯನ್ನು ಬಿಡಿಸಲು ಮುಂದಾಗಿ ಸಾರ್ವಜನಿಕರಿಂದ ಮತ್ತು ಪೊಲೀಸರಿಂದ ಛೀಮಾರಿಗೊಳಗಾದ ಘಟನೆಯೂ ನಡೆದಿದೆ.

**ಸಾರ್ವಜನಿಕರ ಪ್ರತಿಕ್ರಿಯೆ:** ಜಿಲ್ಲೆಯ ಪತ್ರಿಕೆಯೊಂದರಲ್ಲಿ ವರದಿಯಾದಂತೆ ವೀರಾಜಪೇಟೆ ಸರಕಾರಿ ಮಾದರಿ ಪ್ರಾಥಮಿಕ ಶಾಲಾ ಆವರಣದ ಸಂಪಿಗೆ ಮರಕ್ಕೆ ಕಳೆದ 50 ವರ್ಷಗಳಿಂದ ಯಾರೂ ನೇಣು ಬಿಗಿದುಕೊಂಡು ಸತ್ತಿಲ್ಲ. ಇದೊಂದು ಕಪೋಲಕಲ್ಪಿತ ಎಂದು ಶಾಲೆಯ ಆಸುಪಾಸಿನ ನಿವಾಸಿಗಳು ಪತ್ರಿಕೆಯೊಂದಿಗೆ ಪ್ರತಿಕ್ರಿಯಿಸಿದ್ದಾರೆ.

ಮಕ್ಕಳ ಅಸ್ವಸ್ಥತೆಗೂ, ಅಂತೋಣಿಯ ಪ್ರಾರ್ಥನಾ ಕಾರ್ಯಕ್ರಮಕ್ಕೂ ತಾಳೆ ಹಾಕಿ ನೋಡಿದರೆ ಜಿಲ್ಲೆಯಲ್ಲಿ ವ್ಯವಸ್ಥಿತ ಮತಾಂತರ ಜಾಲ ಕಾರ್ಯನಿರ್ವಹಿಸುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಮತಾಂತರಗಳ ಜಾಲಕ್ಕೆ ಮುಗ್ದ ಮಕ್ಕಳನ್ನು ಬಲಿಕೊಡುತ್ತಿರುವ ವಿಚಾರ ತೀವ್ರ ಖೇದಕರ ಈ ಬಗ್ಗೆ ಜಿಲ್ಲಾಡಳಿತ ಎಚ್ಚೆತ್ತು ತನಿಖೆ ಕೈಗೊಳ್ಳುವುದು ಸೂಕ್ತ.

# ಕನ್ನಡ ರಾಜ್ಯೋತ್ಸವ -ಪೂರ್ವಭಾವಿ ಸಭೆ



**ಮಡಿಕೇರಿ :** ಕನ್ನಡ ರಾಜ್ಯೋತ್ಸವ ಆಚರಣೆ ಕುರಿತಂತೆ ಜಿಲ್ಲಾಧಿಕಾರಿ ಅಶ್ವತ್ಥ ನಾರಾಯಣಗೌಡ ಅವರ ಅಧ್ಯಕ್ಷತೆಯಲ್ಲಿ ನಿನ್ನೆ ಅಧಿಕಾರಿಗಳು ಹಾಗೂ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳ ಸಭೆ ನಡೆಯಿತು.

ಉತ್ತರ ಕರ್ನಾಟಕದಲ್ಲಿ ಸಂಭವಿಸಿದ ನೆರೆಹಾವಳಿ ಕಾರಣದಿಂದ ಸಮಾರಂಭವನ್ನು ಸರಳವಾಗಿ ಆಚರಿಸಲು ಈಗಾಗಲೇ ಸರ್ಕಾರದಿಂದ ಸೂಚನೆ ಬಂದಿದೆ. ಸಾರಿಗೆ ಸಚಿವರಾದ ಆರ್.ಅಶೋಕ್ ಅವರನ್ನು ಧ್ವಜಾರೋಹಣ ನೆರವೇರಿಸಲು ನಿಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿಯವರು ಸಭೆಗೆ ಮಾಹಿತಿ ನೀಡಿದರು. ಈ ಹಿನ್ನಲೆಯಲ್ಲಿ ಯಾವ ರೀತಿಯಲ್ಲಿ ಸರಳವಾಗಿ ಕಾರ್ಯಕ್ರಮ ನಡೆಸಬೇಕೆಂಬ ಬಗ್ಗೆ ಅವರು ಸಭೆಯಲ್ಲಿ ಸಲಹೆಗಳನ್ನು ಆಹ್ವಾನಿಸಿದರು.

ನ. 1 ರಂದು ಬೆಳಿಗ್ಗೆ ನಗರಸಭೆ ಬಳಿಯಿಂದ ಕೋಟೆ ಆವರಣದವರೆಗೆ ಕನ್ನಡಾಂಬೆಯ ಭಾವಚಿತ್ರವನ್ನು ವಾಹನದಲ್ಲಿಟ್ಟು ಅಲಂಕರಿಸಿ ಮೆರವಣಿಗೆ ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಬೆಳಿಗ್ಗೆ 9 ಗಂಟೆಗೆ ಸರಿಯಾಗಿ ರಾಷ್ಟ್ರಧ್ವಜಾರೋಹಣ ರಾಷ್ಟ್ರಗೀತೆ ನಂತರ ಕನ್ನಡ ಧ್ವಜಾರೋಹಣ ನಾಡಗೀತೆಗಳನ್ನು ಸಮಾರಂಭದಲ್ಲಿ ಹಾಡಲು ಹಾಗೂ ಪೊಲೀಸ್ ಹಾಗೂ ಎನ್.ಸಿ.ಸಿ. ಸ್ಕೌಟ್ಸ್ ಮತ್ತು ಗೈಡ್ಸ್ ಸೇವಾದಳ ಮತ್ತಿತರ ತಂಡಗಳಿಂದ ಪಥ ಸಂಚಲನ ಹಾಗೂ ಸಚಿವರಿಗೆ ಗೌರವ ವಂದನೆ ಸಲ್ಲಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ಸಂದರ್ಭ ವಿವಧ ಇಲಾಖೆಗಳಿಗೆ ಕಾರ್ಯಕ್ರಮದ ಅಂಗವಾಗಗಿ ವಿವಿಧ ಜವಾಬ್ದಾರಿಗಳನ್ನು ನೀಡಲಾಯಿತು.

ಸಭೆಯಲ್ಲಿ ಹಾಜರಿದ್ದ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಆಯುಕ್ತರಾದ ಕೆ.ಟಿ.ಬೇಬಿ ಮ್ಯಾಥ್ಯೂ ಅವರು ಗ್ರಾ.ಪಂ. ಮಟ್ಟದಲ್ಲಿಯೂ ರಾಜ್ಯೋತ್ಸವ ಆಚರಿಸಲು ನಿರ್ದೇಶನ ನೀಡುವಂತೆ ಜಿಲ್ಲಾಧಿಕಾರಿಯವರನ್ನು ಕೋರಿದರು. ಈ ಕುರಿತು ಎಲ್ಲಾ ಗ್ರಾ.ಪಂ.ಗಳಿಗೂ ಸೂಚನೆ ನೀಡುವುದಾಗಿ ಅವರು ಹೇಳಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಚಂದ್ರೇಗೌಡ, ಡಿ.ವೈ.ಎಸ್.ಪಿ. ಪ್ರಕಾಶ್, ವಿವಿಧ ಇಲಾಖಾ ಅಧಿಕಾರಿಗಳು, ಸಂಘ ಸಂಸ್ಥೆಗಳ ಪ್ರತಿನಿಧಿಗಳು ಸಭೆಯಲ್ಲಿ ಹಾಜರಿದ್ದರು.

### ಬಿಎಸ್ಸೆನ್ನೆಲ್ ಸಂಸ್ಥೆಯ ಜಾಗದಲ್ಲಿ ಅಕ್ರಮ ಗುಡಿಸಲು ತೆರವು

# ಕಂದಾಯ ಇಲಾಖಾ ಕಾರ್ಯಾಚರಣೆ

**ಶನಿವಾರಸಂತೆ:** ಆಲೂರು ಸಿದ್ದಾಪುರ ಗ್ರಾಮದಲ್ಲಿ ಬಿ ಎಸ್ ಎನ್ ಎಲ್ ಸಂಸ್ಥೆಗೆ ಟವರ್ ನಿರ್ಮಿಸಲು ಮೀಸಲಿಟ್ಟಿದ್ದ ಸ್ಥಳದಲ್ಲಿ ಅತಿಕ್ರಮಿಸಿ ಗುಡಿಸಲು ನಿರ್ಮಿಸಿಕೊಂಡಿದ್ದ 8 ಮಂದಿಯ ಗುಡಿಸಲುಗಳನ್ನು ಕಂದಾಯ ಇಲಾಖೆ ತೆರವುಗೊಳಿದೆ.

ಆಲೂರು ಸಿದಾಪುರದ ಸುಳುಗೋಡು ರಸ್ತೆ ಬದಿಯಲ್ಲಿರುವ ಬಿಸಿ ಎಂ ಬಾಲಕರ ವಸತಿ ನಿಲಯದ ಪಕ್ಕದಲ್ಲಿರುವ ಪೈಸಾರಿ ಜಾಗದಲ್ಲಿ 8 ಮಂದಿ ಸ್ಥಳೀಯರು ಹಾಗೂ ಸುತ್ತ ಮುತ್ತಲಿನ ಕೆಲವು ಗ್ರಾಮಸ್ಥರು ಕೆಲವು ದಿನಗಳ ಹಿಂದೆ ಅಡಿಪಾಯ ತೆಗೆದು ಅನಧಿಕೃತವಾಗಿ ಗುಡಿಸಲು ನಿರ್ಮಿಸಿಕೊಂಡಿದ್ದರು.

ಈ 8 ಮಂದಿಗೆ ಕಂದಾಯ ಇಲಾಖೆಯಿಂದ ದಾಖಲಾತಿಯಾಗಲಿ, ಹಕ್ಕುಪತ್ರವಾಗಲಿ ಇರಲಿಲ್ಲ, ಕೆಲವು ಪ್ರಭಾವಿಗಳ ಕುಮ್ಮಕ್ಕಿನಿಂದ ಇವರುಗಳು ತಳಪಾಯ ತೆಗೆದು ಗುಡಿಸಲುಗಳನ್ನು ನಿರ್ಮಿಸಿಕೊಂಡಿರುವ ಕುರಿತು ಗ್ರಾಮಸ್ಥರು ಶನಿವಾರಸಂತೆ ಕಂದಾಯ ಇಲಾಖೆಗೆ ದೂರು ನೀಡಿದ್ದರು.

ಶುಕ್ರವಾರ ಕಂದಾಯ ಪರಿವೀಕ್ಷಕ ಪದ್ಮನಾಭಯ್ಯ, ಗ್ರಾಮ ಲೆಕ್ಕಾಧಿಕಾರಿ ನಾಗರಾಜ್ ಹಾಗೂ ಸಿಬ್ಬಂದಿಗಳು 8 ಮಂದಿಯ ಗುಡಿಸಲುಗಳನ್ನು ಪೊಲೀಸರ ನೆರವಿನಿಂದ ತೆರವುಗೊಳಿಸಿದರು.

ನಂತರ ಗ್ರಾಮಸ್ಥರಿಗೆ ಮನವರಿಕೆ ಮಾಡಿದ ಕಂದಾಯ ಪರಿವೀಕ್ಷಕ ಇಲ್ಲಿ ಬಿ ಎಸ್ ಎನ್ ಎಲ್ ಟವರ್ ನಿರ್ಮಿಸಲು ಅನುಮತಿ ನೀಡಲಾಗಿದೆ. ಮೀಸಲಿಟ್ಟಿರುವ ಈ ಜಾಗದಲ್ಲಿ ಇನ್ನು ಮುಂದೆ ಅತಿಕ್ರಮಿಸಿದರೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಎಚ್ಚರಿಸಿದರು. ಈ ಮದ್ಯೆ ಗ್ರಾಮದ ಪ್ರಮುಖರೊಬ್ಬರು ಕಂದಾಯ ಇಲಾಖೆಯ ಆಧಿಕಾರಿಗಳ ಮಧ್ಯೆ ಮಾತಿನ ಚಕಮಕಿ ನಡೆಯಿತು.

ಈ ಸಂದರ್ಭ ಗ್ರಾಮದ ಪ್ರಮುಖರಾದ ಪ್ರಭುದೇವ್, ಶಿವಪ್ಪ, ಕೆ.ಪಿ. ಕುಮಾರ್, ಹೊಸೂರು ಮಣಿ ಮುಂತಾದವರಿದ್ದರು.

# 'ಡೋಂಟ್‌ಕೇರ್' ಅಧಿಕಾರಿಯಿಂದ ನೆಮ್ಮದಿಗೆ ಭಂಗ

■ ವಿನು

**ಸುಂಟಿಕೊಪ್ಪ :** ಇದುವರೆಗೆ ತನ್ನ ಅಸಮರ್ಪಕ ಕಾರ್ಯವೈಖರಿಯೊಂದಿಗೆ ಜನರ ನೆಮ್ಮದಿ ಕೆಡಿಸುತ್ತಾ ಎಲ್ಲೆಡೆ ಆಕ್ರೋಶಕ್ಕೆ ಗುರಿಯಾಗಿರುವ ನೆಮ್ಮದಿ ಕೇಂದ್ರಗಳ ವಲಯ ಮಾನವ ಸಂಪನ್ಮೂಲ ಅಧಿಕಾರಿ ಇದೀಗ ತನ್ನ ಕೈ ಕೆಳಗಿನ ಸಿಬ್ಬಂದಿಗಳಿಗೆ ವಿನಾಕಾರಣ ಕಿರುಕುಳ ನೀಡುತ್ತಾ ಅವರ ನೆಮ್ಮದಿ ಕೆಡಿಸುತ್ತಿರುವ ಆರೋಪ ಕೇಳಿ ಬಂದಿದೆ.

ಈ ಹುದ್ದೆಗೆ ನೂತನವಾಗಿ ನಿಯುಕ್ತಿಗೊಂಡಿರುವ ಈತ ಮೊದಲೇ ಹೆಸರು ಕೆಡಿಸಿಕೊಂಡಿರುವ ಸಂಸ್ಥೆಯನ್ನು ಸರಿದಾರಿಗೆ ತರುವ ಪ್ರಯತ್ನ ಮಾಡದೆ ಯಾರದೋ ಆಮಿಷಕ್ಕೆ ಒಳಗಾಗಿ ನೆಮ್ಮದಿ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನಿಷ್ಠಾವಂತ ಹಾಗೂ ಅನುಭವಿ ಸಿಬ್ಬಂದಿಗಳಿಗೆ ವಿನಾ ಕಾರಣ ಕಿರುಕುಳ ನೀಡುತ್ತಿರುವ ಬಗ್ಗೆ ಜಿಲ್ಲಾದ್ಯಂತ ಕಾರ್ಯ ನಿರ್ವಹಿಸುತ್ತಿರುವ ಬಹುತೇಕ ಎಲ್ಲಾ ನೆಮ್ಮದಿ ಕೇಂದ್ರಗಳ ಸಿಬ್ಬಂದಿಗಳ ಆರೋಪವಾಗಿದೆ.

**ವಜಾಕ್ಕೆ ಕುಂಟುನೆಪ:** ಈ ಹಿಂದೆ ಸುಂಟಿಕೊಪ್ಪ ಆಪರೇಟರ್‌ರವರ ಪತಿ ನೆಮ್ಮದಿ ಕೇಂದ್ರಗಳ ಟೆಕ್ನಿಷನ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಆದರೆ ವೈಯಕ್ತಿಕ ಕಾರಣಗಳಿಂದ ಅವರು ಈ ಹುದ್ದೆಗೆ ರಾಜೀನಾಮೆ ನೀಡಿದ್ದನ್ನು ಸಹಿಸಲಾಗದೇ ವಲಯ ಸಂಪನ್ಮೂಲ ಅಧಿಕಾರಿ ಅವರಿಗೆ ನ್ಯಾಯಯುತವಾಗಿ ಸಲ್ಲಬೇಕಾಗಿದ್ದ ಭತ್ಯೆಯ ಚೆಕ್ಕನ್ನು ನೀಡದೇ ಸತಾಯಿಸುತ್ತಿದ್ದು ಮೇಲಧಿಕಾರಿಗಳಿಗೆ ತಪ್ಪು ಮಾಹಿತಿ ನೀಡಿ ಆಪರೇಟರ್ ಆಗಿರುವ ಅವರ ಪತ್ನಿಯನ್ನು ತೆಗೆದು ಹಾಕುವ ಬೆದರಿಕೆಯೊಡ್ಡಿದ್ದಾನೆ ಎನ್ನಲಾಗಿದೆ. ಈ ಬಗ್ಗೆ ನ್ಯೂಸ್ ಗ್ಯಾಲರಿಗೆ ಮಾಹಿತಿ ದೊರೆತ ಮೇರೆಗೆ ಈತನನ್ನು ಸಂಪರ್ಕಿಸಿದಾಗ ಸುಂಟಿಕೊಪ್ಪ ಆಪರೇಟರ್‌ನ್ನು ತೆಗೆದು ಹಾಕಲು ಸ್ವತಃ ಉಪವಿಭಾಗಾಧಿಕಾರಿಗಳೇ ಆದೇಶ ಹೊರಡಿಸಿದ್ದಾರೆ ಎಂದು ಸುಳ್ಳು ಮಾಹಿತಿ ನೀಡಿದ್ದಾನೆ. ಈತನ ಮಾತಿನ ಸತ್ಯಾಸತ್ಯತೆ ಅರಿಯಲು ಖುದ್ದಾಗಿ ಉಪವಿಭಾಗಾಧಿಕಾರಿಗಳನ್ನು ಭೇಟಿ ಮಾಡಿದಾಗ ಉಪವಿಭಾಗಾಧಿಕಾರಿಗಳು ತಾನು ಆ ರೀತಿಯ ಆದೇಶ ಹೊರಡಿಸಿಯೇ ಇಲ್ಲ ಎಂದು ತಿಳಿಸಿದ್ದಾರೆ. ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಯೋರ್ವರ ಮೇಲೆಯೇ ಗೂಬೆ ಕೂರಿಸಲು ಯತ್ನಿಸಿರುವ ಈತನ ಕಾರ್ಯ ವೈಖರಿಯೇ ಇಲ್ಲಿ ಪ್ರಶ್ನಾರ್ಹವಾಗಿದೆ.

**ಎ.ಸಿ., ಡಿ.ಸಿ., ಎಂ.ಎಲ್.ಎ. ಡೋಂಟ್ ಕೇರ್ :** ಸುಂಟಿಕೊಪ್ಪದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಪರೇಟರನ್ನು ತೆಗದು ಹಾಕಿಯೇ ಸಿದ್ದ ಎಂದು ಪಣತೊಟ್ಟಿರುವ ಈತ ಮಡಿಕೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೂ ಕಿರುಕುಳ ನೀಡುತ್ತಿದ್ದು, ಈತನ ತಾಳಕ್ಕೆ ತಕ್ಕಂತೆ ಕುಣಿಯದವರನ್ನು ಕೂಡ ಕರ್ತವ್ಯದಿಂದ ವಜಾಗೊಳಿಸುವ ಕೀಳು ಮಟ್ಟಕ್ಕೆ ಇಳಿದಿದ್ದು ಈ ನಿಟ್ಟಿನಲ್ಲಿ ಸಿಬ್ಬಂದಿಗಳು ಎ.ಸಿ., ಡಿ.,ಸಿ ಅಥವಾ ಎಂ.ಎಲ್.ಎ. ಗೆ ಪುಕಾರು ನೀಡಿದರೂ 'ಐ ಡೋಂಟ್ ಕೇರ್' ಎಂದು ತಿರುಗಾಡುತ್ತಿದ್ದಾನೆ.

ಈತನ ವಿರುದ್ದ ತಹಶೀಲ್ದಾರ್‌ರವರಿಗೆ ಪತ್ರಕರ್ತರ ವತಿಯಿಂದ ಪುಕಾರು ನೀಡಲಾಗಿದ್ದು ಈ ಬಗ್ಗೆ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ.

# ಏಕಲವ್ಯ ವಸತಿ ಶಾಲೆಗೆ ಐಟಿಡಿಪಿ ಅಧಿಕಾರಿ ಭೇಟಿ

**ವೀರಾಜಪೇಟೆ:** ಬಾಳುಗೋಡುವಿನ ಏಕಲವ್ಯ ಶಾಲೆಗೆ ಐಟಿಡಿಪಿ ಅಧಿಕಾರಿ ಘಂಟಿ ಅವರು ಭೇಟಿ ಬುಧವಾರ ನಡೆದ ಅಹಿತಕರ ಘಟನೆಗಳ ಕುರಿತು ಮಾಹಿತಿ ಪಡೆದರು.

ಶಾಲೆಯಲ್ಲಿ ಅಧ್ಯಾಪಕರು ಹಾಗೂ ವಾರ್ಡನ್ ನಡುವೆ ಮಾರಾಮಾರಿ ನಡೆದು, ವಿದ್ಯಾರ್ಥಿಗಳಿಗೆ ಊಟ ನೀಡುವುದು ವಿಳಂಬವಾಗಿದ್ದರೂ, ಏನೂ ನಡೆದಿಲ್ಲವೆಂಬಂತೆ ಸಂದರ್ಶನಾ ಪುಸ್ತಕದಲ್ಲಿಿ ಅ.29 ರಂದು ಏಕಲವ್ಯ ವಸತಿ ಶಾಲೆಗೆ ಭೇಟಿ ನೀಡಿ ತಪಾಸಣೆ ಮಾಡಲಾಯಿತು. ಸಿಬ್ಬಂದಿಯಗಳ ಕುರಿತು ಮಕ್ಕಳ ಜತೆಯಲ್ಲಿ ಚರ್ಚಿಸಿ ಶೈಕ್ಷಣಿಕ ವರ್ಷದಲ್ಲಿ ಹೆಚ್ಚಿನವರು ಪೂರ್ಣವಾಗಿ ಎಲ್ಲಾ ವಿಷಯಗಳ ಬಗ್ಗೆ ವಿಶೇಷ ಭೋದನಾ ವ್ಯವಸ್ಥೆ ಮಾಡತಕ್ಕದ್ದು' ಎಂದು ಷರಾ ಬರೆಯಲಾಗಿದೆ.

ಈ ಎಲ್ಲಾ ವಿಚಾರಗಳನ್ನು ಗಮನಿಸಿ ದಾಗ ಈ ರೀತಿಯ ಘಟನೆಗಳು ಒಂದೆರಡಲ್ಲ, ಹಲವು ವರ್ಷಗಳಿಂದ ವಿವಾದಕ್ಕೆ ಗುರಿಯಾಗಿರುವ ಏಕಲವ್ಯ ವಸತಿ ಶಾಲೆಗೆ ಭಾರಿ ಪ್ರಮಾಣದ ಶಸ್ತ್ರಚಿಕಿತ್ಸೆ ಅಗತ್ಯವಿದ್ದು ಜಿ.ಪಂ. ಆರೋಗ್ಯ- ಶಿಕ್ಷಣ ಸ್ಥಾಯಿ ಸಮಿತಿಯ ಅಧ್ಯಕ್ಷ ಮನು ಮುತ್ತಪ್ಪ ಈ ಬಗ್ಗೆ ಗಮನಹರಿಸುವರೆ ಎಂಬುವುದನ್ನು ಕಾದು ನೋಡಬೇಕಾಗಿದೆ.